# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ ಪುತ್ತೂರು ದ.ಕ.

ಸ್ಥಾಪನೆ: 1958

SDR 38/58-59

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು - 574201, ದ. ಕ.
ದೂರವಾಣಿ : 08251-233274, 9449318792 website : www.pcics.in

ರಾಜ್ಯ ಸರಕಾರದ ಪಾಲು ಬಂಡವಾಳ ಹೊಂದಿರುವ ಸಂಸ್ಥೆ

69 ವರ್ಷಗಳ ಸುದೀರ್ಘ ಗ್ರಾಹಕರ ಸೇವೆಯಲ್ಲಿ



ದಿ| ಕೃಷ್ಣ ಮೂಲ್ಯ
ಸ್ಥಾಪಕಾಧ್ಯಕ್ಷರು

## 2025-26 ಸಾಲಿನ ವರದಿ ಮತ್ತು ಲೆಕ್ಕ ಪತ್ರಗಳು

# ವಾರ್ಷಿಕ ಮಹಾಸಭೆ




## ಆಮಂತ್ರಣ

ದಿನಾಂಕ : 06/09/2026, ಆದಿತ್ಯವಾರ

ಸ್ಥಳ : ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸಭಾ ಭವನ, ಪುತ್ತೂರು, ದ. ಕ

ಸಹಕಾರದಿಂದ ಪ್ರಗತಿ - ಪ್ರಗತಿಗಾಗಿ ಸಹಕಾರ

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ ಪುತ್ತೂರು

## ಆಡಳಿತ ಮಂಡಳಿಯ ಸದಸ್ಯರು



ಸ್ಥಾಪನೆ :1958



ಶ್ರೀ ಭಾಸ್ಕರ ಎಂ. ಪೆರುವಾಯಿ, B.A.(Law)LLB. ವಕೀಲರು
ಅಧ್ಯಕ್ಷರು
: 08251-231897, 9448956897, 9364015797

ಶ್ರೀ ದಾಮೋದರ ಕುಲಾಲ್, B.Com
ಉಪಾಧ್ಯಕ್ಷರು
: 9448624589

## ನಿರ್ದೇಶಕರು



ಶ್ರೀ ಬಿ.ಎಸ್. ಕುಲಾಲ್
: 9481761699



ಶ್ರೀ ಗಣೇಶ್ ಪಿ.
: 9448550114



ಶ್ರೀ ಪದ್ಮಕುಮಾರ್ ಎಚ್.
: 9972725645



ಶ್ರೀ ಪೂವಪ್ಪ ಕಡಂಬಾರು
: 8971976923



ಶ್ರೀ ಸೇಸಪ್ಪ ಕುಲಾಲ್
: 9845295797



ಶ್ರೀ ಪ್ರಶಾಂತ್ ಬಂಜನ್
: 9880014232



ಶ್ರೀ ನಾಗೇಶ್ ಕುಲಾಲ್
: 9448625453



ಶ್ರೀಮತಿ ರೇಖಾ ದಿನೇಶ್
: 9481957506



ಶ್ರೀಮತಿ ರಂಜಿತ
: 9740687999



ಶ್ರೀ ಎಸ್. ಜನಾರ್ದನ ಮೂಲ್ಯ
ಮುಖ್ಯ ಕಾರ್ಯನಿರ್ವಹಣಾಧಿಕಾರಿ
: 9449318792

# ಅಧ್ಯಕ್ಷರ ಲೇಖನಿಯಿಂದ.....



ಸಮಸ್ತ ಸದಸ್ಯರನ್ನು 68ನೇ ವಾರ್ಷಿಕ ಮಹಾಸಭೆಗೆ ಗೌರವಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ಸಹಕಾರ ರಂಗದಲ್ಲಿ 3ನೇ ಅವಧಿಯ ಪ್ರಥಮ ವರ್ಷವನ್ನು ಯಶಸ್ವಿಯಾಗಿ ಪೂರೈಸಲು ಸಹಕರಿಸಿದ ಎಲ್ಲಾ ಸದಸ್ಯ ಬಂಧುಗಳನ್ನು ಈ ಮಹಾಸಭೆಗೆ ಪ್ರೀತಿಯಿಂದ ಸ್ವಾಗತಿಸುತ್ತಾ ತಮ್ಮೆಲ್ಲರನ್ನು ಅಭಿನಂದಿಸುತ್ತೇನೆ. ಸಹಕಾರಿ ರಂಗವು ವಿಶಾಲವಾದುದು. ನಮ್ಮ ಸಹಕಾರ ಸಂಘದ ವಿಶಿಷ್ಟ ಮತ್ತು ವಿನೂತನ ಪ್ರಯೋಗ ಮತ್ತು ಸಾಧನೆಗಳ ಮೂಲಕ ಆದರ್ಶವಾಗಿ ಮುನ್ನಡೆಯುತ್ತಿದೆ. ವೈವಿಧ್ಯಮಯ ಯೋಜನೆಗಳನ್ನು ಕಾಲಕಾಲಕ್ಕೆ ಬದಲಾವಣೆಗೊಳಿಸಿ ಸದಸ್ಯರಿಗೆ ಒದಗಿಸುತ್ತಿದ್ದೇವೆ. ಆ ಮೂಲಕ ಸಮಸ್ತ ಸದಸ್ಯ ಬಂಧುಗಳ ಸೇವೆಯನ್ನು ಮಾಡಿ ಸದಸ್ಯರ ಹಿತವನ್ನು ಕಾಪಾಡುವುದರ ಮೂಲಕ ಜನ ಮನ್ನಣೆಯನ್ನು ಗಳಿಸಿದ್ದೇವೆ.

ಕಳೆದ 13 ವರ್ಷಗಳ ಪ್ರಗತಿಯನ್ನು ಅವಲೋಕಿಸಿದರೆ ಸಹಕಾರ ಸಂಘ ಗಮನಾರ್ಹ ಸಾಧನೆಯನ್ನು ಸಾಧಿಸುವಲ್ಲಿ ಸಫಲರಾಗಿದ್ದೇವೆ. ಸಂಘದ 2014 ರಲ್ಲಿ ರೂ. 11.83 ಕೋಟಿ ಇದ್ದ ಠೇವಣಿ, 2026 ಮಾರ್ಚ್ ಅಂತ್ಯಕ್ಕೆ ರೂ. 154 ಕೋಟಿಗಳಾಗಿದ್ದು, ಈ ಆರ್ಥಿಕ ವರ್ಷದಲ್ಲಿ ರೂ. 250 ಕೋಟಿಗೆ ಏರಿಸುವ ಗುರಿ ಹೊಂದಲಾಗಿದೆ. 2014 ರಲ್ಲಿ ರೂ. 10.18 ಕೋಟಿ ಇದ್ದ ಹೊರಬಾಕಿ ಸಾಲ, 2026 ರಲ್ಲಿ ರೂ. 117 ಕೋಟಿಗೆ ಏರಿಸಲಾಗಿದೆ. 2014 ರಲ್ಲಿ ಸಂಘದಲ್ಲಿ ಒಟ್ಟು 13 ಖಾಯಂ ಸಿಬ್ಬಂದಿಗಳು ಇದ್ದು, 2026 ರಲ್ಲಿ 46 ಜನ ಖಾಯಂ ಸಿಬ್ಬಂದಿ ಬಲ ಇರುತ್ತದೆ. ಸಿಬ್ಬಂದಿಗಳಿಗೆ 2014 ರಲ್ಲಿ ಇದ್ದ ವೇತನಕ್ಕಿಂತ 3 ಪಟ್ಟು ಅಧಿಕಗೊಳಿಸಿದ್ದು ಉತ್ತಮ ವೇತನವನ್ನು ನೀಡುತ್ತಿದ್ದೇವೆ. 2014 ರಲ್ಲಿ ಸಂಘದ ಒಟ್ಟು 7 ಶಾಖೆಗಳು ಮಾತ್ರ ಇದ್ದು, ಈಗ 18 ಶಾಖೆಗಳು ಸಂಘದ ಕಾರ್ಯವ್ಯಾಪ್ತಿಯಲ್ಲಿ ಸದಸ್ಯರ ಸೇವೆಗೆ ಲಭ್ಯವಿದೆ. ಮಾಣಿ ಶಾಖೆಗೆ ಸುಸಜ್ಜಿತ ಹೊಸ ಕಟ್ಟಡ, ಬಿ ಸಿ ರೋಡ್ ಹಾಗೂ ವಿಟ್ಲ ಶಾಖೆಗೆ ಸ್ವಂತ ಕಟ್ಟಡ ಖರೀದಿಗೊಳಿಸಿ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿದೆ. ಬೆಳ್ಳಾರೆಯಲ್ಲಿ 21 ಸೆಂಟ್ಸ್ ಜಮೀನು ಖರೀದಿಸಲಾಗಿದೆ. ಮುಂದಿನ ದಿನಗಳಲ್ಲಿ ಸದ್ರಿ ಜಮೀನಿನಲ್ಲಿ ಕಟ್ಟಡ ರಚನೆ ಮಾಡಿ ಶಾಖೆಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು. ಎಲ್ಲಾ ಹೊಸ ಶಾಖೆಗಳಿಗೆ ಹವಾನಿಯಂತ್ರಕ ಅಳವಡಿಸಲಾಗಿದೆ. ಲೆಕ್ಕ ಪತ್ರದ ನಿರ್ವಹಣೆಗೆ ಸಂಪೂರ್ಣ ಗಣಕೀಕೃತ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಸದಸ್ಯರ ವ್ಯವಹಾರದ ಬಗ್ಗೆ ಎಸ್ ಎಂ ಎಸ್ ಸೌಲಭ್ಯ, ನೆಫ್ಟ್ / ಆರ್ ಟಿ ಜಿ ಎಸ್ ವ್ಯವಸ್ಥೆ ಇದ್ದು ಮುಂದಿನ ದಿನಗಳಲ್ಲಿ ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಕುಂಬಾರಿಕೆ ಉತ್ಪನ್ನಗಳ ಮಾರಾಟಕ್ಕೆ ವಾಹನ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಉಚಿತ ಪುಸ್ತಕ ವಿತರಣೆಯನ್ನು ಮಾಡಲಾಗಿದೆ.

ಸಹಕಾರ ಸಂಘದಲ್ಲಿ ಇನ್ನಷ್ಟು ಅಭಿವೃದ್ಧಿಯನ್ನು ಸಾಧಿಸಬೇಕೆನ್ನುವ ಹಂಬಲದಿಂದ ಮತ್ತೊಮ್ಮೆ ತಮ್ಮೆಲ್ಲರ ಆಶೀರ್ವಾದದಿಂದ ಅಧ್ಯಕ್ಷನಾಗಿ ಮುಂದುವರಿಯುತ್ತಿದ್ದೇನೆ. ತಮ್ಮೆಲ್ಲರ ಪೂರ್ಣ ಸಹಕಾರ, ಮಾರ್ಗದರ್ಶನದೊಂದಿಗೆ ಸಹಕಾರ ಸಂಘವನ್ನು ಎತ್ತರಕ್ಕೆ ಕೊಂಡೊಯ್ಯುವ ಸಹಕಾರ ಸಂಘದ ಅಭಿವೃದ್ಧಿಗೆ ನಿಮ್ಮೆಲ್ಲರ ಪ್ರೋತ್ಸಾಹ ಸದಾ ಇರಲಿ ಎಂಬ ಆಶಯದೊಂದಿಗೆ ಎಲ್ಲರಿಗೂ ಮನದಾಳದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇತೀ ತಮ್ಮವ,

**ಭಾಸ್ಕರ ಎಂ. ಪೆರುವಾಯಿ,** ಬಿ.ಎ.(ಲಾ).ಎಲ್.ಎಲ್.ಬಿ.
ಅಧ್ಯಕ್ಷರು

## ದಿನಾಂಕ 02–10–2025 ರಂದು ನಡೆದ ಕಲ್ಲಡ್ಕ ಶಾಖೆಯ ಉದ್ಘಾಟನಾ ಸಮಾರಂಭ.










## ದಿನಾಂಕ 22–10–2025 ರಂದು ನಡೆದ ಕಡಬ ಶಾಖೆಯ ಉದ್ಘಾಟನಾ ಸಮಾರಂಭ.











# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

**ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು 574 201**

# ವಾರ್ಷಿಕ ಮಹಾಸಭೆಯ ಆಮಂತ್ರಣ

ಸನ್ಮಾನ್ಯ ಸದಸ್ಯರೇ,

ಈ ಸಂಘದ **2025–26**ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **ದಿನಾಂಕ 06–09–2026ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 10.30ಕ್ಕೆ** ಸರಿಯಾಗಿ **ಪುತ್ತೂರು "ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸಭಾಭವನ"**ದಲ್ಲಿ ಜರಗಿಸುವುದಾಗಿ ತೀರ್ಮಾನಿಸಲಾಗಿದೆ. ಸಂಘದ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ನೀಡಿ ಸಭಾ ಕಲಾಪಗಳನ್ನು ನಡೆಸಿಕೊಡಬೇಕಾಗಿ ವಿನಂತಿಸುತ್ತೇವೆ.

[ಆಡಳಿತ ಮಂಡಳಿ ಆದೇಶದ ಮೇರೆಗೆ]

ಸ್ಥಳ : ಪುತ್ತೂರು
ದಿನಾಂಕ : 30-07-2026

**ಎಸ್. ಜನಾರ್ದನ ಮೂಲ್ಯ,** B.Sc., HDCM
**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

## ಕಾರ್ಯಕ್ರಮ

1. ದಿನಾಂಕ 24–08–2025ರಂದು ನಡೆದ ಮಹಾಸಭೆಯ ನಿರ್ಣಯ ಓದಿ ದಾಖಲಿಸುವುದು. (ಪುಟ ಸಂಖ್ಯೆ 14ರಿಂದ 16)
2. 2025–26ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಅಂಗೀಕರಿಸುವ ಬಗ್ಗೆ. (ಪುಟ ಸಂಖ್ಯೆ 2ರಿಂದ 6)
3. 2025–26ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರ ಹಾಗೂ ಆಡಿಟ್ ವರದಿಗಳ ಅಂಗೀಕಾರ ಹಾಗೂ ಆಡಿಟ್ ವರದಿಯಲ್ಲಿ ದಾಖಲಿಸಿದ ನ್ಯೂನತೆಗಳಿಗೆ ಸಲ್ಲಿಸಿದ ಸಮಜಾಯಿಷಿಕೆ ಅನುಮೋದನೆ ಬಗ್ಗೆ. (ಪುಟ ಸಂಖ್ಯೆ 9ರಿಂದ 12)
4. 2025–26ನೇ ಸಾಲಿನ ಅಂದಾಜು ಆಯ ವ್ಯಯಕ್ಕಿಂತ ಹೆಚ್ಚಾದ ಖರ್ಚುಗಳ ಅಂಗೀಕಾರ. (ಪುಟ ಸಂಖ್ಯೆ 7)
5. 2026–27ನೇ ಸಾಲಿನ ವಾರ್ಷಿಕ ಅಂದಾಜು ಮುಂಗಡ ಪತ್ರ ಅನುಮೋದನೆ. (ಪುಟ ಸಂಖ್ಯೆ 8ರಿಂದ 9)
6. 2026–27ನೇ ಸಾಲಿನ ಕಾರ್ಯಯೋಜನೆಗಳ ಅಂಗೀಕಾರ. (ಪುಟ ಸಂಖ್ಯೆ 6)
7. 2026–27ನೇ ಸಾಲಿಗೆ ಪಾಲು ಬಂಡವಾಳದ ಮಿತಿ ನಿಗದಿಗೊಳಿಸುವ ಬಗ್ಗೆ.
8. 2025–26ನೇ ಸಾಲಿನಲ್ಲಿ ಗಳಿಸಿದ ನಿವ್ವಳ ಲಾಭ ರೂ. 3,02,36,700.00ನ್ನು ಸಹಕಾರ ಸಂಘದ ಉಪನಿಬಂಧನೆ ನಂ 81ಕ್ಕೆ ಅನುಸಾರವಾಗಿ ವಿಂಗಡಿಸುವ ಬಗ್ಗೆ. (ಪುಟ ಸಂಖ್ಯೆ 13)
9. ಸಹಕಾರ ಸಂಘದ ಉಪ ನಿಬಂಧನೆಗೆ ಸೂಚಿಸಲಾಗಿರುವ ತಿದ್ದುಪಡಿಯನ್ನು ಅನುಮೋದಿಸುವ ಬಗ್ಗೆ. (ಪುಟ ಸಂಖ್ಯೆ 17ರಿಂದ 18)
10. ಸದಸ್ಯರುಗಳನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗ್ಗೆ ಟಿಪ್ಪಣಿ. (ಪುಟ ಸಂಖ್ಯೆ 2)
11. 2026–27ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಆಯ್ಕೆ ಮಾಡುವ ಬಗ್ಗೆ ಹಾಗೂ ಅವರಿಗೆ ಪಾವತಿಸತಕ್ಕ ಸಂಭಾವನೆಯನ್ನು ನಿಗದಿಗೊಳಿಸುವ ಬಗ್ಗೆ.
12. ಸಂಘದ ನಿರ್ದೇಶಕ ಮಂಡಳಿ ಸದಸ್ಯರಿಗೆ ಪಾವತಿಸಿದ ಪ್ರಯಾಣ ಭತ್ತೆ, ಸಭಾ ಭತ್ತೆ ಮತ್ತು ದಿನ ಭತ್ತೆಗಳ ಅನುಮೋದನೆ ಬಗ್ಗೆ.
13. ಸಹಕಾರ ಸಂಘದ ಉಪನಿಬಂಧನೆ ಅನುಸಾರವಾಗಿ ವಿವಿಧ ರೀತಿಯ ಸಾಲಗಳ ಗರಿಷ್ಟ ಮಿತಿಯನ್ನು ಪರಿಷ್ಕರಿಸುವ ಬಗ್ಗೆ.
14. ಸಭಾಧ್ಯಕ್ಷರ ಅನುಮತಿ ಮೇರೆಗೆ ಬರುವ ಇತರ ವಿಷಯಗಳು.

**● ವಿ. ಸೂ. ●**

1. ಸದಸ್ಯರು ಬರುವಾಗ ಈ ಸೂಚನಾ ಪತ್ರವನ್ನು ತರಬೇಕಾಗಿ ವಿನಂತಿ.
2. ಮಹಾಸಭೆಯಲ್ಲಿ ಮಂಡಿಸಲಾಗುವ ಯಾವುದೇ ವಿಷಯದ ಬಗ್ಗೆ ತಾರೀಕು 29–08–2026ರ ಮೊದಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಬರಹ ಮೂಲಕ ಸಲ್ಲಿಸುವುದು.

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು 574201

## 2025-26ನೇ ಸಾಲಿನ ಆಡಳಿತ ಮಂಡಳಿಯ ವರದಿ

ಸನ್ಮಾನ್ಯ ಸದಸ್ಯರೇ,

ಸುಧೀರ್ಘ ಇತಿಹಾಸ ಹೊಂದಿರುವ ನಮ್ಮ ಸಹಕಾರ ಸಂಘದ 68ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತಾ 2025-26ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಸಂತೋಷ ಪಡುತ್ತೇವೆ.

ಗ್ರಾಮೀಣ ಕುಂಬಾರಿಕೆ ಹಾಗೂ ಕುಶಲ ಕರ್ಮಿಗಳ ಅಭಿವೃದ್ಧಿಗಾಗಿಯೇ ಸ್ಥಾಪಿತವಾದ ನಮ್ಮ ಸಹಕಾರ ಸಂಘ ಈಗ ಎಲ್ಲಾ ವರ್ಗದ ಸದಸ್ಯರಿಗೂ ತನ್ನ ಸೇವೆಯನ್ನು ನೀಡುತ್ತಾ ಬಂದಿದೆ. ಕುಂಬಾರ ಸಮಾಜದ ಹಲವಾರು ಸಹಕಾರಿ ಧುರೀಣರು ತಮ್ಮ ನಿಸ್ವಾರ್ಥ, ವಿಶಿಷ್ಟ ಹಾಗೂ ಶ್ರದ್ಧಾಪೂರ್ವಕ ಸೇವೆಯನ್ನು ಸಲ್ಲಿಸಿದುದರ ಫಲವಾಗಿ ಸಹಕಾರ ಸಂಘವು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಿ ಜನ ಮಾನಸದಲ್ಲಿ ವಿಶಿಷ್ಟ ಪ್ರೀತಿ, ವಿಶ್ವಾಸವನ್ನು ಗಳಿಸಲು ಸಾಧ್ಯವಾಗಿದೆ. ಹಿರಿಯ ಸಹಕಾರಿ ಬಂಧುಗಳ ಸಹಕಾರ, ಸದಸ್ಯರ-ಗ್ರಾಹಕ ಬಂಧುಗಳ ಪ್ರೀತಿ ವಿಶ್ವಾಸವೇ ನಮಗೆ ಶ್ರೀ ರಕ್ಷೆ.

**ಸದಸ್ಯತ್ವ ಮತ್ತು ಪಾಲು ಬಂಡವಾಳ :** ಒಂದು ಸಹಕಾರ ಸಂಘದ ತಳಪಾಯವೇ ಸದಸ್ಯರು. ಸಂಘದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಸಂಘವು ಬಲಗೊಳ್ಳುತ್ತದೆ. ಸಂಘವು ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು ಜಿಲ್ಲಾ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ದಿನಾಂಕ 31-03-2026ರ ಅಂತ್ಯಕ್ಕೆ ಒಟ್ಟು 6,719 ಎ ತರಗತಿ ಹಾಗೂ 36,093 ಡಿ ತರಗತಿ ಸದಸ್ಯರಿರುತ್ತಾರೆ.

| ವಿವರ | ಎ ತರಗತಿ | ಮೊಬಲಗು | ಡಿ ತರಗತಿ | ಮೊಬಲಗು |
|---|---|---|---|---|
| ವರ್ಷಾರಂಭದಲ್ಲಿದ್ದ ಸದಸ್ಯರು | 6,031 | 3,10,68,002.00 | 33,778 | 25,23,975.00 |
| ವರ್ಷದಲ್ಲಿ ಸೇರಿದ ಸದಸ್ಯರು | 702 | 24,18,500.00 | 2,360 | 2,36,010.00 |
| ವರ್ಷದಲ್ಲಿ ಸದಸ್ಯತನ ಹಿಂದೆ ಪಡೆದವರು | 14 | 1,19,500.00 | 45 | 3,670.00 |
| ವರ್ಷಾಖೈರಿಗೆ ಇರುವ ಸದಸ್ಯರು | 6,719 | 3,33,67,002.00 | 36,093 | 27,56,315.00 |

ವರ್ಷಾಂತ್ಯಕ್ಕೆ ಸರಕಾರದ ಪಾಲು ಬಂಡವಾಳ ರೂ. 1,00,000.00 ಇರುತ್ತದೆ. ಸಂಘದ ಬೆಳವಣಿಗೆಯಲ್ಲಿ ವಿಶ್ವಾಸವನ್ನಿರಿಸಿ ಪಾಲು ಬಂಡವಾಳ ತೊಡಗಿಸಿದ ಎಲ್ಲಾ ಸದಸ್ಯರಿಗೆ ಪ್ರೀತಿಯ ಅಭಿನಂದನೆಯನ್ನು ಸಲ್ಲಿಸುತ್ತೇವೆ.

**ನಿಧಿಗಳು :** ಸಂಘದಲ್ಲಿ ಸಂಚಯಿಸಿದ ಕ್ಷೇಮ ನಿಧಿ ರೂ. 4,26,38,335.15 ಹಾಗೂ ಇತರ ನಿಧಿಗಳು ರೂ. 4,39,00,066.92 ಇರುತ್ತದೆ.

**ಠೇವಣಾತಿ :** ಸಹಕಾರ ಸಂಘದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಕಷ್ಟು ಸಂಪನ್ಮೂಲ ಸಂಗ್ರಹಿಸುವ ಅಗತ್ಯವಿದ್ದು, ವಿವಿಧ ಆಕರ್ಷಕ ಬಡ್ಡಿದರದ ಠೇವಣಾತಿಗಳ ಮುಖಾಂತರ ಸಂಗ್ರಹಿಸಲಾಗುತ್ತಿದೆ. ತಾ. 31-03-2026ರಲ್ಲಿ ಒಟ್ಟು ಠೇವಣಿಯ ಮೊತ್ತ ರೂ. 154,99,93,327.59 ಇದ್ದು ವರದಿ ಸಾಲಿನಲ್ಲಿ ರೂ, 38,27,95,994.52 ಹೆಚ್ಚುವರಿ ಠೇವಣಿ ಸಂಗ್ರಹಿಸಿ 32.80 ಶೇಕಡಾ ಪ್ರಗತಿ ಸಾಧಿಸಲಾಗಿದೆ.

| ಠೇವಣಾತಿಗಳು | 31-03-2024 | 31-03-2025 | 31-03-2026 |
|---|---|---|---|
| ಉಳಿತಾಯ ಠೇವಣಿ | 6,50,74,458.38 | 7,03,74,248.72 | 8,46,04,835.04 |
| ನಿರಖು ಠೇವಣಿ | 71,20,30,141.00 | 93,77,81,296.00 | 1,27,89,80,750.00 |
| ನಿತ್ಯನಿಧಿ ಠೇವಣಿ | 10,65,30,571.00 | 10,87,63,336.00 | 12,67,15,228.00 |
| ಕಡ್ಡಾಯ ಠೇವಣಿ | 2,08,75,899.00 | 2,34,59,936.00 | 2,69,15,859.00 |
| ಆವರ್ತ ನಿಧಿ ಠೇವಣಿ | 25,32,328.00 | 24,19,518.00 | 36,46,018.00 |
| ಸಿಬ್ಬಂದಿ ಭದ್ರತಾ ಠೇವಣಿ | 1,67,69,765.25 | 1,95,67,435.25 | 2,35,14,754.25 |
| ಕುಂಭ ಲಕ್ಷ್ಮೀ ನಗದು ಪತ್ರ | 43,92,836.00 | 43,92,836.00 | 43,92,836.00 |
| ಚಾಲ್ತಿ ಖಾತೆ ಠೇವಣಿ | 18,877.40 | 1,45,098.10 | 2,18,918.30 |
| ಸ್ಥಗಿತ ಖಾತೆ | 2,93,629.00 | 2,93,629.00 | 2,93,629.00 |
| ಕುಂಭಶ್ರೀ ಮಾಂಗಲ್ಯ ಠೇವಣಿ | 0.00 | 0.00 | 7,10,500.00 |
| **ಜುಮ್ಲಾ** | **92,85,18,505.03** | **116,71,97,333.07** | **154,99,93,327.59** |

**ಪಡೆದ ಸಾಲಗಳು :** ವರದಿ ಸಾಲಿನಲ್ಲಿ ಸರಕಾರದಿಂದ ಯಾ ಇತರ ಯಾವುದೇ ಮೂಲಗಳಿಂದ ಸಾಲ ಪಡೆದಿಲ್ಲ.

**ಸದಸ್ಯರಿಗೆ ವಿತರಿಸಿದ ಸಾಲ :** ಸದಸ್ಯರ ಹಾಗೂ ಕುಶಲ ಕರ್ಮಿಗಳ ಅವಶ್ಯಕತೆಗಳಿಗನುಗುಣವಾಗಿ ಸಹಕಾರ ಸಂಘದಿಂದ ಅಲ್ಪಾವಧಿ, ಮಧ್ಯಮಾವಧಿ, ಧೀರ್ಘಾವಧಿ ಸಾಲಗಳನ್ನು ವಿವಿಧ ಉದ್ದೇಶಗಳಿಗಾಗಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ ವಿತರಿಸಿದ ಹಾಗೂ ಹೊರ ಬಾಕಿ ಸಾಲದ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | ವಿತರಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ |
|---|---|---|---|
| 1 | ಜಾಮೀನು ಸಾಲ | 54,95,000.00 | 85,17,698.40 |
| 2 | ಠೇವಣಿ ಆಧಾರದ ಸಾಲ | 10,71,97,328.00 | 3,18,74,945.00 |
| 3 | ಚಿನ್ನಾಭರಣ ಈಡಿನ ಸಾಲ | 98,92,94,568.00 | 43,54,07,959.00 |
| 4 | ಮಧ್ಯಮಾವಧಿ ಸಾಲ | 2,90,27,500.00 | 4,23,39,300.30 |
| 5 | ಧೀರ್ಘಾವಧಿ ಸಾಲ | 22,30,05,000.00 | 48,99,56,261.80 |
| 6 | ಕ್ಯಾಷ್ ಕ್ರೆಡಿಟ್ ಸಾಲ | 30,07,54,970.00 | 13,41,96,307.90 |
| 7 | ವಾಹನ ಅಡಮಾನ ಸಾಲ | 1,53,64,739.00 | 2,72,54,018.00 |
| 8 | ಸಿಬ್ಬಂದಿ ಸಾಲ | 46,03,000.00 | 46,31,591.00 |
| 9 | ಸ್ವ ಸಹಾಯ ಸಂಘಗಳ ಸಾಲ | 8,10,000.00 | 6,07,228.00 |
| 10 | ಸದಸ್ಯರ ಮಕ್ಕಳ ವಿದ್ಯಾಭ್ಯಾಸ ಸಾಲ | 0.00 | 1,18,151.00 |
| | **ಜುಮ್ಲಾ** | **167,55,52,105.00** | **117,49,03,460.40** |

ವರದಿ ಸಾಲಿನಲ್ಲಿ ರೂ. 167,55,52,105.00 ಸಾಲ ವಿತರಿಸಿ ರೂ. 144,97,93,547.00 ಸಾಲ ವಸೂಲಿ ಬಂದಿರುತ್ತದೆ. ವರ್ಷಾಂತ್ಯಕ್ಕೆ ರೂ. 117,49,03,460.40 ಹೊರಬಾಕಿ ಸಾಲ ಇದ್ದು, ಈ ಪೈಕಿ ರೂ. 5,35,59,928.00 ಸುಸ್ತಿಯಾಗಿರುತ್ತದೆ. ಸುಸ್ತಿ ಸಾಲದ ಮೊಬಲಗು ಹೊರಬಾಕಿ ಸಾಲದ 4.56 ಶೇಕಡಾ ಇರುತ್ತದೆ.

**ವಿನಿಯೋಗ :** ಕ್ಷೇಮ ನಿಧಿಯ ಬಾಬ್ತು ರೂ. 4,45,00,399.10 ಹಾಗೂ ದ್ರವ್ಯಾಸ್ತಿಯ ಬಾಬ್ತು ವಿವಿಧ ಬ್ಯಾಂಕುಗಳಲ್ಲಿ ರೂ. 49,42,01,655.00 ಹಾಗೂ ಪಾಲುಗಳಲ್ಲಿ ರೂ. 99,000.00 ವಿನಿಯೋಗಿಸಲಾಗಿದೆ. ನಿರಖು ಠೇವಣಿ ವಿನಿಯೋಗಗಳಿಂದ ಹಾಗೂ ಪಾಲುಗಳಲ್ಲಿ ವಿನಿಯೋಗದಿಂದ ರೂ. 4,55,36,916.00 ಬಡ್ಡಿ ಆದಾಯ ಬಂದಿರುತ್ತದೆ.

**ಸ್ಥಿರಾಸ್ತಿಗಳು :** ಸಂಘದಲ್ಲಿ ಒಟ್ಟು ರೂ. 3,35,90,103.21 ಮೌಲ್ಯದ ಸ್ಥಿರಾಸ್ತಿ ಇದ್ದು ಇವುಗಳಿಗೆ ರೂ. 25,04,891.00 ಸವಕಳಿಗೆ ಕಾದಿರಿಸಲಾಗಿದೆ. ಸ್ಥಿರಾಸ್ತಿಗಳ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | ಪುತ್ತೂರು ನಗರ ನಿವೇಶನ | 5,000.00 |
| 2 | ಕೌಡಿಚಾರು ಜಮೀನು | 1,634.55 |
| 3 | ಕೈಗಾರಿಕೆ ಇಲಾಖೆ ಕಟ್ಟಡ (ಕೌಡಿಚಾರು) | 1,00,000.00 |
| 4 | ಕೇಂದ್ರ ಕಛೇರಿ ಕಟ್ಟಡ (ಪುತ್ತೂರು) | 34,65,609.08 |
| 5 | ಕೌಡಿಚಾರು ಶಾಖೆ ಮಾರಾಟ ಮಳಿಗೆ ಕಟ್ಟಡ | 13,64,799.50 |
| 6 | ಅರ್ ಐ ಎಸ್ ಸಿ ಅನುದಾನದ ಕಟ್ಟಡ (ಕೌಡಿಚಾರು) | 1,05,514.00 |
| 7 | ಕೊಳವೆ ಬಾವಿ (ಕೌಡಿಚಾರು) | 48,500.00 |
| 8 | ಮಾಣಿ ಶಾಖೆಯ ಕಟ್ಟಡ | 1,34,81,656.08 |
| 9 | ಕೊಳವೆ ಬಾವಿ (ಮಾಣಿ) | 1,42,005.00 |
| 10 | ವಿಟ್ಲ ಶಾಖಾ ಕಛೇರಿ ಕಟ್ಟಡ ಕೋಣೆ ಖರೀದಿ ಮೌಲ್ಯ | 47,25,079.00 |
| 11 | ಬೆಳ್ಳಾರೆ ಶಾಖೆಯ ಜಮೀನು | 67,19,556.00 |
| 12 | ಬಿ ಸಿ ರೋಡು ಶಾಖೆಯ ಮಾರಾಟ ಮಳಿಗೆ ಕೋಣೆ | 16,15,750.00 |
| 13 | ಮಾಣಿ ಶಾಖೆಯ ಜಮೀನಿನ ಮೌಲ್ಯ | 18,15,000.00 |

**ಚರಾಸ್ತಿಗಳು :** ವರದಿ ವರ್ಷದಲ್ಲಿ ರೂ. 31,32,987.18 ಮೌಲ್ಯದ ಪೀಠೋಪಕರಣ, ರೂ. 13,10,783.86 ಮೌಲ್ಯದ ಗಣಕಯಂತ್ರ, ರೂ. 9,47,012.89 ಮೌಲ್ಯದ ಬೊಲೆರೋ ಪಿಕ್ ಅಪ್ ವಾಹನ, ರೂ. 32,119.48 ಮೌಲ್ಯದ ಹವಾನಿಯಂತ್ರಕ ಖರೀದಿಸಲಾಗಿದ್ದು ವರ್ಷಾಂತ್ಯಕ್ಕೆ ರೂ. 1,23,96,984.74 ಮೌಲ್ಯದ ಪೀಠೋಪಕರಣ, ರೂ. 68,60,159.46 ಮೌಲ್ಯದ ಗಣಕಯಂತ್ರ, ರೂ. 20,49,432.31 ಮೌಲ್ಯದ ವಾಹನ, ರೂ. 3,00,637.00 ಮೌಲ್ಯದ ಯಂತ್ರೋಪಕರಣ, ರೂ 4,33,899.39 ಮೌಲ್ಯದ ಹವಾನಿಯಂತ್ರಕ ಇರುತ್ತದೆ. ಪೀಠೋಪಕರಣಗಳ ಮೇಲೆ ರೂ. 12,83,088.37, ಗಣಕಯಂತ್ರದ ಮೇಲೆ ರೂ. 13,17,818.46 ಮತ್ತು ಯಂತ್ರೋಪಕರಣದ ಮೇಲೆ ರೂ. 50,793.00 ಮತ್ತು ವಾಹನದ ಮೇಲೆ ರೂ. 3,07,415.00 ಸವಕಳಿಗೆ ಕಾದಿರಿಸಲಾಗಿದೆ.

**ಶಾಖಾವಾರು ವ್ಯವಹಾರ :** ಶಾಖಾವಾರು ವ್ಯವಹಾರದ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಶಾಖೆಯ ವಿವರ | ವ್ಯವಹಾರ [ಲಕ್ಷಗಳಲ್ಲಿ] | ಠೇವಣಿಗಳು [ಲಕ್ಷಗಳಲ್ಲಿ] | ಹೊರಬಾಕಿಸಾಲ [ಲಕ್ಷಗಳಲ್ಲಿ] |
|---|---|---|---|---|
| 1 | ಪುತ್ತೂರು | 41,558.25 | 5,713.49 | 5,234.81 |
| 2 | ಕೌಡಿಚಾರು | 2,104.50 | 392.72 | 332.50 |
| 3 | ಗುರುವಾಯನಕೆರೆ | 3,722.77 | 701.54 | 838.62 |
| 4 | ಬೆಳ್ಳಾರೆ | 3,818.26 | 693.79 | 705.78 |
| 5 | ಕುಡ್ತಮುಗೇರು | 1,425.22 | 319.70 | 239.33 |
| 6 | ಮಾಣಿ | 6,455.87 | 1,551.45 | 835.87 |
| 7 | ವಿಟ್ಲ | 3,073.99 | 627.82 | 427.88 |
| 8 | ಉಪ್ಪಿನಂಗಡಿ | 2,361.24 | 471.54 | 593.83 |
| 9 | ಬಿ ಸಿ ರೋಡ್ | 4,552.47 | 1,519.86 | 479.13 |
| 10 | ಮೆಲ್ಕಾರು | 2,480.51 | 561.93 | 390.90 |
| 11 | ಬೆಳ್ತಂಗಡಿ | 2,783.37 | 456.37 | 355.17 |
| 12 | ಸಿದ್ದಕಟ್ಟೆ | 2,389.46 | 325.44 | 378.67 |
| 13 | ಮುಡಿಪು | 2,917.53 | 391.58 | 443.27 |
| 14 | ಫರಂಗಿಪೇಟೆ | 1,068.60 | 250.74 | 93.41 |
| 15 | ಮಡಂತ್ಯಾರು | 1,301.03 | 378.52 | 186.02 |
| 16 | ಮಾಡೂರು | 1,586.98 | 384.61 | 73.84 |
| 17 | ಕಲ್ಲಡ್ಕ | 897.77 | 396.41 | 69.53 |
| 18 | ಕಡಬ | 644.44 | 362.43 | 70.49 |
| | **ಒಟ್ಟು** | **85,142.26** | **15,499.94** | **11,749.05** |

ಸಹಕಾರ ಸಂಘವು ಕೇಂದ್ರ ಕಛೇರಿ ಸೇರಿ 18 ಶಾಖೆಗಳನ್ನು ಹೊಂದಿದ್ದು, ರೂ. 851.42 ಕೋಟಿ ವ್ಯವಹಾರ ದಾಖಲಿಸಿ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸಲಾಗಿದೆ. ಗ್ರಾಹಕರ ಅನುಕೂಲಕ್ಕಾಗಿ ಎಲ್ಲಾ ಶಾಖೆಗಳಲ್ಲಿ ವ್ಯವಹಾರದ ಮಾಹಿತಿ ತಿಳಿಯಲು ಎಸ್. ಎಂ. ಎಸ್. ವ್ಯವಸ್ಥೆ ಇರುತ್ತದೆ.

**ಖರೀದಿ ಮತ್ತು ಮಾರಾಟ :** ವರದಿ ಸಾಲಿನಲ್ಲಿ ರೂ. 23,55,775.00 ಮೌಲ್ಯದ ಕುಂಬಾರಿಕಾ ಉತ್ಪನ್ನ ಖರೀದಿ ಮಾಡಿ ರೂ. 36,01,822.80 ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡಲಾಗಿದೆ. ವರ್ಷಾಂತ್ಯಕ್ಕೆ ರೂ. 23,65,878.91 ಮೌಲ್ಯದ ಸರಕು ದಾಸ್ತಾನು ಇರುತ್ತದೆ. ವ್ಯಾಪಾರದಿಂದ ರೂ. 17,55,427.45 ಲಾಭ ಗಳಿಸಲಾಗಿದೆ. ಸದಸ್ಯ ಕುಂಬಾರ ಕುಶಲ ಕರ್ಮಿಗಳು ತಮ್ಮ ಕುಂಬಾರಿಕಾ ಉತ್ಪನ್ನಗಳನ್ನು ಸಹಕಾರ ಸಂಘಕ್ಕೇ ಮಾರಾಟ ಮಾಡಿ ಇನ್ನೂ ಅಧಿಕ ಲಾಭ ಗಳಿಸಲು ಸಹಕರಿಸುವಂತೆ ವಿನಂತಿಸುತ್ತೇವೆ.

**ಲಾಭ ನಷ್ಟ :** ವರದಿ ಸಾಲಿನಲ್ಲಿ ವರ್ಷಾಖೈರಿಗೆ ರೂ. 3,02,36,700.00 ನಿವ್ವಳ ಲಾಭ ಗಳಿಸಲಾಗಿದೆ.

**ಸದಸ್ಯರ ಕ್ಷೇಮಾಭಿವೃದ್ಧಿ :** ಕೇಂದ್ರ ಸರಕಾರದ ಕರಕುಶಲ ಮಂತ್ರಾಲಯದ ಸಹಯೋಗದೊಂದಿಗೆ ಕುಶಲ ಕರ್ಮಿಗಳಿಗೆ ಕೇಂದ್ರ ಸರಕಾರದ ಯೋಜನೆಯ ಮಾಹಿತಿ ಶಿಬಿರವನ್ನು ಏರ್ಪಡಿಸಲಾಗಿದೆ ಮತ್ತು ಸದಸ್ಯರಿಗೆ ಗುರುತಿನ ಚೀಟಿ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಬ್ರಹ್ಮಾವರದ ಹಾವಂಜೆಯಲ್ಲಿ 30 ಜನ ಕುಶಲ ಕರ್ಮಿಗಳಿಗೆ ಕಾವಿ ಕಲೆಯ ಬಗ್ಗೆ ಕರಕುಶಲ ಅಭಿವೃದ್ಧಿ ಮಂತ್ರಾಲಯದ ಸಹಯೋಗದಲ್ಲಿ ತರಬೇತಿಯನ್ನು ಆಯೋಜಿಸಿ ಯಶಸ್ವಿಯಾಗಿ ಪೂರೈಸಲಾಗಿದೆ.

ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ 7 ದಿನಗಳ ಕಾಲ ಕರಕುಶಲ ವಸ್ತು ಪ್ರದರ್ಶನ ಮೇಳವನ್ನು ಆಯೋಜಿಸಿ ದೇಶದ ವಿವಿಧ ರಾಜ್ಯಗಳಿಂದ ಬಂದ ಕುಶಲ ಕರ್ಮಿಗಳು ಪಾಲ್ಗೊಂಡು, ತಮ್ಮ ಉತ್ಪನ್ನವನ್ನು ಪ್ರದರ್ಶಿಸಿ ಮಾರುಕಟ್ಟೆಯ ಪ್ರಯೋಜನ ಪಡೆದಿರುತ್ತಾರೆ.

**ಆಡಳಿತ :** ಸಹಕಾರ ಸಂಘದ ಆಡಳಿತ ಮಂಡಳಿಗೆ ದಿನಾಂಕ 02/02/2025ರಂದು ಚುನಾವಣೆ ನಡೆದಿದ್ದು ಸದ್ರಿ ಚುನಾವಣೆಯಲ್ಲಿ 11 ಮಂದಿ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ದಿನಾಂಕ 15/02/2025ರಂದು ನಡೆದ ನಿರ್ದೇಶಕರ ಸಮಿತಿ ಸಭೆಯಲ್ಲಿ ಶ್ರೀ ಭಾಸ್ಕರ ಎಂ ಪೆರುವಾಯಿ ಅಧ್ಯಕ್ಷರಾಗಿಯೂ, ಶ್ರೀ ದಾಮೋದರ ಕುಲಾಲ್‌ರವರು ಉಪಾಧ್ಯಕ್ಷರಾಗಿಯೂ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವರದಿ ಸಾಲಿನಲ್ಲಿ 16 ಆಡಳಿತ ಮಂಡಳಿ ಸಭೆ ಹಾಗೂ 38 ಸಾಲದ ಸಮಿತಿ ಸಭೆ ಜರಗಿರುತ್ತದೆ. ಹಾಗೂ ದಿನಾಂಕ 24–08–2025ರಂದು ಮಹಾಸಭೆ ಜರಗಿರುತ್ತದೆ. ಮಹಾಸಭೆಗೆ 3479 ಸದಸ್ಯರು ಹಾಜರಾಗಿರುತ್ತಾರೆ. ಸಾಲದ ಸಮಿತಿ ನಿರ್ಣಯಗಳಿಗೆ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಸಂಘದ ದೈನಂದಿನ ವ್ಯವಹಾರವನ್ನು ಆಡಳಿತ ಮಂಡಳಿ ಪ್ರತಿ ತಿಂಗಳು ಸಭೆ ಸೇರಿ ಪರಿಶೀಲಿಸಿ ಅಗತ್ಯದ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ನಮ್ಮ ಸಾಧನೆಗಳು :** ದಿನಾಂಕ 02–10–2025ರಂದು 17ನೇ ಕಲ್ಲಡ್ಕ ಶಾಖೆಯನ್ನು ಈಶಾನ ಕಾಂಪ್ಲೆಕ್ಸ್ ಕೆ. ಸಿ. ರೋಡ್ ಕಲ್ಲಡ್ಕದಲ್ಲಿ ಪ್ರಾರಂಭಿಸಲಾಗಿದೆ. ಶ್ರೀ ಪದ್ಮನಾಭ ಕೊಟ್ಟಾರಿ ಮಾಜಿ ಶಾಸಕರು, ಶ್ರೀ ಶಶಿಕುಮಾರ್ ಬಾಲ್ಯೊಟ್ಟು ಅಧ್ಯಕ್ಷರು ದ. ಕ. ಜಿಲ್ಲಾ ಸಹಕಾರಿ ಯೂನಿಯನ್ ಮತ್ತು ಇತರ ಗಣ್ಯರ ಉಪಸ್ಥಿತಿಯಲ್ಲಿ ಶಾಖೆಯನ್ನು ಪ್ರಾರಂಭಿಸಲಾಗಿದೆ. ಶಾಖೆಯಲ್ಲಿ ಉತ್ತಮ ವ್ಯವಹಾರ ಕಂಡು ಬಂದಿರುತ್ತದೆ.

ದಿನಾಂಕ : 22–10–2025 ರಂದು 18 ನೇ ಕಡಬ ಶಾಖೆಯನ್ನು ಚಾಚಾ ಕಾಂಪ್ಲೆಕ್ಸ್ ಸಂತೆಕಟ್ಟೆ ಬಳಿ ಪ್ರಾರಂಭಿಸಲಾಗಿದೆ. ಡಾ। ತಾಳ್ತಾಜೆ ವಸಂತ ಕುಮಾರ್ ವಿಶ್ರಾಂತ ಪ್ರಾಧ್ಯಾಪಕರು, ಮುಂಬೈ ವಿಶ್ವ ವಿದ್ಯಾನಿಲಯ ಹಾಗೂ ಇತರ ಗಣ್ಯರ ಉಪಸ್ಥಿತಿಯಲ್ಲಿ ಶಾಖೆಯನ್ನು ಉದ್ಘಾಟನೆ ಮಾಡಲಾಗಿದ್ದು ಶಾಖೆಯ ವ್ಯವಹಾರದ ಅಭಿವೃದ್ಧಿಯ ಕಡೆಗೆ ಗಮನ ಹರಿಸಲಾಗಿದೆ. ಎರಡೂ ಶಾಖೆಗಳು ಉತ್ತಮವಾಗಿ ಕಾರ್ಯಾಚರಿಸುತ್ತಿದೆ.

ಉಪ್ಪಿನಂಗಡಿ ಶಾಖೆಯನ್ನು ಉಪ್ಪಿನಂಗಡಿಯ ಗಾಂಧಿ ಪಾರ್ಕ್ ಬಳಿ ರಾಮ್ ಗೋಪಾಲ್ ಕಾಂಪ್ಲೆಕ್ಸ್‌ನ ಒಂದನೇ ಮಹಡಿಗೆ ದಿನಾಂಕ 01–03–2026ರಂದು ಸ್ಥಳಾಂತರಿಸಲಾಗಿದೆ. ಶ್ರೀ ಅಶೋಕ್ ಕುಮಾರ್ ರೈ ಶಾಸಕರು, ಪುತ್ತೂರು ಇವರು ಶಾಖೆಯ ಉದ್ಘಾಟನೆಯಲ್ಲಿ ಭಾಗವಹಿಸಿ, ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸಿ ಸಹಕಾರ ಸಂಘಕ್ಕೆ ಶುಭ ಹಾರೈಸಿರುತ್ತಾರೆ.

ಎಲ್ಲಾ ಶಾಖೆಗಳನ್ನು ಏಕೀಕೃತ ಗಣಕೀಕರಣ ವ್ಯವಸ್ಥೆಗೊಳಿಸಲಾಗಿದೆ. ಸದಸ್ಯರಿಗೆ ಯು ಪಿ ಐ ಪೇಮೆಂಟ್ ಸಿಸ್ಟಮ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಎಲ್ಲಾ ಶಾಖೆಗಳಲ್ಲಿ ಕುಂಬಾರಿಕಾ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ನಮ್ಮ ಸಾಧನೆಯನ್ನು ಪರಿಗಣಿಸಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನವರು ಅತ್ಯುತ್ತಮ ಸಹಕಾರ ಸಂಘ ಎಂದು ಗುರುತಿಸಿ 'ವಿಶೇಷ ಸಾಧನಾ ಪ್ರಶಸ್ತಿ' ನೀಡಿ 6ನೇ ಬಾರಿಗೆ ಗೌರವಿಸಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇವೆ.

**ನೌಕರ ವರ್ಗ :** ಸಹಕಾರ ಸಂಘದಲ್ಲಿ 46 ಖಾಯಂ ಸಿಬ್ಬಂದಿಗಳಿರುತ್ತಾರೆ. ಸಿಬ್ಬಂದಿ ವೆಚ್ಚಗಳಿಗೆ ರೂ. 1,94,35,183.30 ಹಾಗೂ ದಿನಕೂಲಿ ನೌಕರರ ಸಂಭಾವನೆಗೆ ರೂ. 5,41,396.00 ವೆಚ್ಚ ಮಾಡಲಾಗಿದೆ.

**ಲೆಕ್ಕ ಪರಿಶೋಧನೆ :** 2025–26ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಶ್ರೀ ಸುಧೀರ್ ಕುಮಾರ್ ಎನ್. ಕೆ., ಸನ್ನದು ಲೆಕ್ಕಪರಿಶೋಧಕರು ಇವರು ಲೆಕ್ಕ ಪರಿಶೋಧನೆಯನ್ನು ಮಾಡಿ ವರದಿ ಸಲ್ಲಿಸಿರುತ್ತಾರೆ. ಲೆಕ್ಕ ಪರಿಶೋಧಕರು ಸೂಚಿಸಿದ ನ್ಯೂನತೆಗಳಿಗೆ ಆಡಳಿತ ಮಂಡಳಿ ಚರ್ಚಿಸಿ ಅನುಪಾಲನಾ ವರದಿ ತಯಾರಿಸಿ ಮಹಾಸಭೆಯ ಅನುಮೋದನೆಗೆ ಶಿಫಾರಸ್ಸು ಮಾಡಿದೆ. ವರದಿ ಸಾಲಿನಲ್ಲಿ ಸಂಘವನ್ನು 'ಎ' ದರ್ಜೆಯಲ್ಲಿ ವಿಂಗಡಿಸಿರುವುದು ಸಂಘದ ಬೆಳವಣಿಗೆಯ ಬಗ್ಗೆ ಪೂರಕ ಸಾಕ್ಷ್ಯವಾಗಿದೆ.

**ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ :** ದಿನಾಂಕ 01–03–2026 ರಂದು ಸಹಕಾರ ಸಂಘದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಪುತ್ತೂರಿನ ಶಾಸಕರಾದ ಶ್ರೀ ಅಶೋಕ್ ಕುಮಾರ್ ರೈ ರವರು ಭಾಗವಹಿಸಿ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿರುತ್ತಾರೆ. ಒಟ್ಟು 84 ವಿದ್ಯಾರ್ಥಿಗಳಿಗೆ ರೂ. 4,20,000.00 ವಿದ್ಯಾರ್ಥಿ ವೇತನ ವಿತರಣೆ ಮಾಡಲಾಗಿದೆ.

**ನಮ್ಮ ಇತರ ಸೇವೆಗಳು :** ಸಹಕಾರ ಸಂಘದ ಸದಸ್ಯರಿಗೆ ಎಲ್ಲಾ ರೀತಿಯ ಸೇವೆಗಳು ನಮ್ಮ ಎಲ್ಲಾ ಶಾಖೆಗಳಲ್ಲಿ ದೊರೆಯುವಂತೆ ಪ್ರಯತ್ನಿಸಲಾಗಿದೆ. ಇ ಸ್ಟಾಂಪಿಂಗ್ ಸೇವೆಯನ್ನು ಪುತ್ತೂರು, ಬಿ.ಸಿ. ರೋಡ್ ಮತ್ತು ಬೆಳ್ತಂಗಡಿ ಶಾಖೆಗಳಲ್ಲಿ ಸ್ಥಾಪಿಸಲಾಗಿದೆ. RTGS ಮತ್ತು NEFT ಸೌಲಭ್ಯವನ್ನು ಎಲ್ಲಾ ಶಾಖೆಗಳಲ್ಲಿ ಕಲ್ಪಿಸಲಾಗಿದೆ. ಸದಸ್ಯರ ವಾಹನಗಳ ಸುರಕ್ಷತೆಗಾಗಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿಯ ಮುಖಾಂತರ ವಿಮಾ ಸೇವೆಯನ್ನು ನೀಡುತ್ತಿದ್ದೇವೆ. ಪಹಣಿ ಪತ್ರಿಕೆ ವಿತರಣೆಗೆ ಕೂಡ ಕ್ರಮ ಕೈಗೊಳ್ಳಲಾಗಿದೆ. ಸದಸ್ಯರಿಗೆ ಒಂದೇ ಕಡೆ ಎಲ್ಲಾ ಸೇವೆಗಳು ಲಭ್ಯವಾಗುವಂತೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಿಕೊಡಲಾಗುವುದು.

**2026–27ನೇ ಸಾಲಿನ ಕಾರ್ಯಯೋಜನೆಗಳು :**

1. ಸಂಘದ ಠೇವಣಿಯನ್ನು 250 ಕೋಟಿಗೆ ಹೆಚ್ಚಿಸಿ ಹೊಸ ಪ್ರಗತಿಯನ್ನು ಸಾಧಿಸುವುದು.
2. ಸಂಘದ ಕಾರ್ಯವ್ಯಾಪ್ತಿಯಲ್ಲಿ 5 ಶಾಖೆಗಳನ್ನು ತೆರೆಯುವುದು.
3. ಕುಂಬಾರಿಕೆಯ ಕೈಗಾರಿಕೆಯ ಬಗ್ಗೆ ಕುಶಲ ಕರ್ಮಿಗಳಿಗೆ ವಿಶೇಷ ತರಬೇತಿಯನ್ನು ಆಯೋಜಿಸುವುದು.
4. ಸದಸ್ಯರ ಅನುಕೂಲಕ್ಕಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸುವುದು.
5. ಕುಂಬಾರಿಕೆ ವೃತ್ತಿ ನಿರತ ಕುಂಬಾರ ಕುಶಲ ಕರ್ಮಿಗಳಿಗೆ 9% ಬಡ್ಡಿ ದರದಲ್ಲಿ ಸಾಲ ನೀಡುವುದು.
6. ಕುಂಬಾರ ಸಮುದಾಯದ ಆಸಕ್ತರಿಗೆ ಉಚಿತ ಹಾಗೂ ನಿರಂತರ ಕುಂಬಾರಿಕಾ ತರಬೇತಿಗೆ ವ್ಯವಸ್ಥೆ ಮಾಡುವುದು.

**ವಿಜ್ಞಾಪನೆ :** ಸಂಘದ ಸದಸ್ಯರು ಪಾಲು ಬಂಡವಾಳ ಹಾಗೂ ಠೇವಣಿಗಳಲ್ಲಿ ಹೆಚ್ಚಿನ ಹಣ ತೊಡಗಿಸಿ ಸಂಘದ ಹೆಚ್ಚಿನ ಅಭಿವೃದ್ಧಿಗೆ ಸಹಕಾರ ನೀಡಬೇಕಾಗಿ ವಿನಂತಿಸುತ್ತೇವೆ. ಸದಸ್ಯರ ಕ್ಷೇಮಾಭಿವೃದ್ಧಿಗೆ ಇರುವ ವಿಮಾ ಯೋಜನೆಗಳ ಪ್ರಯೋಜನವನ್ನು ಪಡೆಯಬೇಕಾಗಿ ವಿನಂತಿಸುತ್ತೇವೆ. ಕುಂಬಾರಿಕೆಯಲ್ಲಿ ಆಸಕ್ತಿ ಇರುವ ಸದಸ್ಯರಿಗೆ ಯಾ ಮಕ್ಕಳಿಗೆ ಉಚಿತವಾಗಿ ತರಬೇತಿಯನ್ನು ನೀಡಲಾಗುತ್ತಿದ್ದು ಇದರ ಪ್ರಯೋಜನವನ್ನು ಪಡೆಯಬೇಕಾಗಿ ವಿನಂತಿ. ಸದಸ್ಯರು ಪಡಕೊಂಡ ಸಾಲವನ್ನು ಕ್ಲಪ್ತ ಸಮಯಕ್ಕೆ ಪಾವತಿಸಿ ವಾಯಿದೆ ದಾಟಿದ ಸಾಲಗಳ ಪ್ರಮಾಣವನ್ನು ಕಡಿಮೆಗೊಳಿಸಲು ಸಹಕರಿಸಬೇಕಾಗಿ ವಿನಂತಿ.

**ಉಪಕಾರ ಸ್ಮರಣೆ :** ಸಂಘದ ಬೆಳವಣಿಗೆಗಾಗಿ ಸೂಕ್ತ ಸಲಹೆ ಸೂಚನೆಗಳನ್ನಿತ್ತು ಮಾರ್ಗದರ್ಶನ ನೀಡಿದ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೂ, ಸಹಕಾರ ಸಂಘಗಳ ಉಪ ನಿಬಂಧಕರಿಗೂ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೂ ನಮ್ಮ ಗೌರವಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಕೇಂದ್ರ ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕರು ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಮಗೆ ಪೂರಕ ಮಾರ್ಗದರ್ಶನ ನೀಡಿರುತ್ತಾರೆ ಹಾಗೂ ಇಲಾಖೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ, ಇವರಿಗೂ ನಮ್ಮ ಧನ್ಯವಾದಗಳು. ಸಕಾಲದಲ್ಲಿ ಲೆಕ್ಕ ಪರಿಶೋಧನೆಯನ್ನು ನಡೆಸಿಕೊಟ್ಟ ಹಾಗೂ ತೆರಿಗೆ ಇಲಾಖೆಗೆ ಮಾಹಿತಿ ನೀಡಲು ಸಹಕರಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಸುಧೀರ್ ಕುಮಾರ್ ಎನ್. ಕೆ. ರವರಿಗೂ ನಮ್ಮ ಧನ್ಯವಾದಗಳು. ಸಂಘದ ಕಾನೂನು ಸಲಹೆಗಾರರಾಗಿ ಸಹಕರಿಸುತ್ತಿರುವ ಎಲ್ಲಾ ಕಾನೂನು ಸಲಹೆಗಾರರಿಗೆ ನಮ್ಮ ವಂದನೆಗಳು. ಸಂಘದ ಚಿನ್ನಾಭರಣ ಮೌಲ್ಯ ಮಾಪಕರಾದ ಎಲ್ಲಾ ಸರಾಫರಿಗೂ ಹಾಗೂ ಜಮೀನು ಮೌಲ್ಯ ಮಾಪನ ಮಾಡುತ್ತಿರುವ ನಮ್ಮ ಸಹಕಾರ ಸಂಘದ ಪ್ಯಾನೆಲ್‌ನಲ್ಲಿರುವ ಎಲ್ಲಾ ಇಂಜಿನಿಯರ್‌ರವರಿಗೆ ನಮ್ಮ ಧನ್ಯವಾದಗಳು. ಬ್ಯಾಂಕಿಂಗ್ ವ್ಯವಹಾರದಲ್ಲಿ ಸಹಕಾರ ನೀಡಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಗೆ ನಮ್ಮ ಧನ್ಯವಾದಗಳು. ಸಹಕಾರ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಪುತ್ತೂರು ನಗರಸಭೆಯವರಿಗೆ ನಮ್ಮ ಮನದಾಳದ ವಂದನೆಗಳು.

ನಮ್ಮ ಅಚ್ಚು ಮೆಚ್ಚಿನ ಸದಸ್ಯ ಠೇವಣಿದಾರರು, ಗ್ರಾಹಕವರ್ಗ, ಕುಶಲ ಕರ್ಮಿಗಳು ಮತ್ತು ಇನ್ನಿತರ ಮಹನೀಯರ ಸಹಕಾರದಿಂದ ಸಂಘದ ವ್ಯವಹಾರವನ್ನು ಈ ಮಟ್ಟಿಗೆ ಅಭಿವೃದ್ಧಿ ಪಡಿಸಲು ಸಾಧ್ಯವಾಗಿದೆ. ಇನ್ನು ಮುಂದೆಯೂ ಈ ಸಹಕಾರ ಸಂಘದ ವ್ಯವಹಾರವನ್ನು ದ್ವಿಗುಣಗೊಳಿಸಲು ಪೂರಕವಾದ ಸಹಕಾರವನ್ನು ನೀಡುವಂತೆ ಕೃತಜ್ಞತಾಪೂರ್ವಕವಾಗಿ ವಿನಂತಿಸುತ್ತೇವೆ. ನಮ್ಮ ಸಹಕಾರ ಸಂಘದ ಎಲ್ಲಾ ಅಭಿಮಾನಿಗಳ ಸರ್ವ ಪ್ರೋತ್ಸಾಹ ಪ್ರೇರೇಪಣೆ ಹಾಗೂ ಸಹಕಾರಗಳು ನಮ್ಮ ಬೆಳವಣಿಗೆಗೆ ಸದಾ ವರದಾನವಾಗಿದೆ. ಅಂತೆಯೇ ಸಂಘದ ಅಭಿವೃದ್ಧಿಗೆ ಪರೋಕ್ಷವಾಗಿ ಸಹಕಾರ ನೀಡಿದ ನಮ್ಮ ಎಲ್ಲಾ ಶಾಖೆಯ ಸಲಹಾ ಸಮಿತಿಯ ಸದಸ್ಯರಿಗೆ ನಮ್ಮ ಪ್ರೀತಿಯ ಅಭಿನಂದನೆಗಳು.

ನಮ್ಮ ಯೋಜನೆ ಹಾಗೂ ಯೋಚನೆಗಳನ್ನು ಸಾಧಿಸುವರೆ ಆಡಳಿತದೊಂದಿಗೆ ಸಹಕರಿಸಿ ಜನಮಾನಸದಲ್ಲಿ ಪ್ರೀತಿ ವಿಶ್ವಾಸ ಗಳಿಸಲು ಜನಾನುರಾಗಿಯಂತಾಗಲು ತಮ್ಮ ಹೊಣೆಗಾರಿಕೆಯನ್ನು ಅರಿತು ಶ್ರಮಿಸಿದ ಸಹಕಾರ ಸಂಘದ ಎಲ್ಲ ಸಿಬ್ಬಂದಿ ವರ್ಗದವರಿಗೂ ವಿಶೇಷವಾಗಿ ನಿತ್ಯ ನಿಧಿ ಸಂಗ್ರಾಹಕರಿಗೂ ನಮ್ಮ ಅಭಿನಂದನೆಗಳು.

ನಮಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸದಸ್ಯರಿಗೆ ತುಂಬು ಹೃದಯದ ಕೃತಜ್ಞತೆಗಳು.

| | |
|---|---|
| **ಶ್ರೀ ದಾಮೋದರ ಕುಲಾಲ್** | **ಶ್ರೀ ಭಾಸ್ಕರ ಎಂ ಪೆರುವಾಯಿ** |
| (ಬಿ. ಕಾಂ.) | (ಬಿ.ಎ. [ಲಾ] ಎಲ್.ಎಲ್.ಬಿ.,) |
| ಉಪಾಧ್ಯಕ್ಷರು | ಅಧ್ಯಕ್ಷರು |

ಹಾಗೂ **ಆಡಳಿತ ಮಂಡಳಿ ಸದಸ್ಯರು**

## ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

### 2025–26ನೇ ಸಾಲಿನಲ್ಲಿ ಅಂದಾಜು ಆಯ ವ್ಯಯಕ್ಕಿಂತ ಹೆಚ್ಚಾದ ಖರ್ಚುಗಳ ಅಂಗೀಕಾರ

| ಕ್ರ. ಸಂ | ವಿವರ | 2025–26ನೇ ಸಾಲಿನಲ್ಲಿ ಆದ ಖರ್ಚು | 2025–26ನೇ ಸಾಲಿನಲ್ಲಿ ಮಂಜೂರು ಮಾಡಿದ ಖರ್ಚು | ಹೆಚ್ಚಾದ ಖರ್ಚು | ಕಾರಣ |
|---|---|---|---|---|---|
| 1 | ಗಣಕ ಯಂತ್ರ ನಿರ್ವಹಣಾ ಶುಲ್ಕ | 7,60,325.40 | 6,00,000.00 | 1,60,325.40 | ಸಹಕಾರ ಸಂಘದ ಎಲ್ಲಾ ಶಾಖೆಗಳಿಗೆ ಕ್ಲೌಡ್ ಸಿಸ್ಟಮ್ ಅಳವಡಿಸಿರುವುದರಿಂದ. |
| 2 | ಗುತ್ತಿಗೆ ನೌಕರರ ವೇತನ | 5,41,396.00 | 5,00,000.00 | 41,396.00 | ಸಹಕಾರ ಸಂಘದ ಸಿಬ್ಬಂದಿ ಕೊರತೆ ನೀಗಿಸಲು ಗುತ್ತಿಗೆ ನೌಕರರನ್ನು ನೇಮಿಸಿರುವುದರಿಂದ. |
| 3 | ಮಹಾಸಭೆ ಖರ್ಚು | 10,42,812.54 | 9,00,000.00 | 1,42,812.54 | ಮಹಾಸಭೆಗೆ ಹೆಚ್ಚು ಸದಸ್ಯರು ಹಾಜರಾಗಿರುವುದರಿಂದ . |
| 4 | ವಿಮೆ | 9,08,049.00 | 9,00,000.00 | 8,049.00 | ಶಾಖೆಗಳ ಇನ್ಸುರೆನ್ಸು ಪಾಲಿಸಿ ಅಧಿಕ ಮೊತ್ತಕ್ಕೆ ಮಾಡಿಸಬೇಕಾದುದರಿಂದ. |
| 5 | ಪೂಜೆಯ ಖರ್ಚು | 1,26,345.00 | 1,00,000.00 | 26,345.00 | ಶಾಖೆಗಳಲ್ಲಿ ಪೂಜೆ ಮಾಡಿಸಿರುವುದರಿಂದ. |
| 6 | ಎಸ್ ಎಂ ಎಸ್ ಶುಲ್ಕ | 1,06,284.70 | 50,000.00 | 56,284.70 | ಸಂದೇಶದ ದರ ಹೆಚ್ಚಾಗಿರುವುದರಿಂದ ಹಾಗೂ ಸಂದೇಶ ಹೆಚ್ಚು ಕಳುಹಿಸಿರುವುದರಿಂದ. |
| 7 | ಸಹಕಾರಿ ಸಪ್ತಾಹ | 35,000.00 | – | 35,000.00 | ಸಹಕಾರಿ ಸಪ್ತಾಹಕ್ಕೆ ದೇಣಿಗೆ ನೀಡಿರುವುದರಿಂದ. |
| 8 | ಜಿ ಎಸ್ ಟಿ ಪಾವತಿ (ಆಡಿಟ್ ಆದೇಶದಂತೆ) | 45,893.00 | – | 45,893.00 | 2021–22 ಮತ್ತು 2024–25ನೇ ಸಾಲಿನ ಜಿ ಎಸ್ ಟಿ ಪಾವತಿಸಬೇಕಾದುದರಿಂದ. |

### ● ಸದಸ್ಯರಿಗೆ ಸೂಚನೆಗಳು ●

- ಸದಸ್ಯರ ವಿಳಾಸ ಬದಲಾವಣೆ ಇದ್ದಲ್ಲಿ ನೂತನ ವಿಳಾಸದ ದಾಖಲೆಗಳನ್ನು ನೀಡಿ ಸಂಘದಲ್ಲಿ ವಿಳಾಸ ತಿದ್ದುಪಡಿ ಮಾಡಿಸುವುದು.
- ಸದಸ್ಯತನ ರಿಜಿಸ್ಟ್ರಿಯಲ್ಲಿ ತಮ್ಮ ಹೆಸರಲ್ಲಿ ತಿದ್ದುಪಡಿ ಮಾಡಬೇಕಾಗಿದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿಯನ್ನು ನೀಡಿ ಸದಸ್ಯತನ ರಿಜಿಸ್ಟ್ರಿಯಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು.
- ಪಾಲು ಮುನಾಫೆಯನ್ನು ಉಳಿತಾಯ ಖಾತೆಗೆ ವರ್ಗಾವಣೆ ಮಾಡಲಾಗುವುದರಿಂದ ಸದಸ್ಯರು ಕಡ್ಡಾಯವಾಗಿ ಉಳಿತಾಯ ಖಾತೆಯನ್ನು ತೆರೆದು ಡಿವಿಡೆಂಡನ್ನು ಕ್ಲಪ್ತ ಸಮಯದಲ್ಲಿ ಪಾವತಿಸಲು ಸಹಕರಿಸುವುದು.
- ಸದಸ್ಯರು ಕಾಲಕಾಲಕ್ಕೆ ತಮ್ಮ ಭಾವಚಿತ್ರ, ಆಧಾರ್ ಕಾರ್ಡ್, ಪಾನ್‌ಕಾರ್ಡ್‌ನ್ನು ಸಂಘಕ್ಕೆ (ಕೆ ವೈ ಸಿ ದಾಖಲೆಯನ್ನು) ನೀಡುವುದು.
- ಅಪೂರ್ಣ ಪಾಲು ಬಂಡವಾಳ ಹೊಂದಿರುವ ಸದಸ್ಯರು ಒಂದು ಪೂರ್ಣ ಪಾಲು ಬಂಡವಾಳದ ಮೊತ್ತವನ್ನು ಪಾವತಿಸಿ ಸದಸ್ಯತನದ ಹಕ್ಕನ್ನು ಊರ್ಜಿತವಿರಿಸುವುದು. (ಒಂದು ಪಾಲಿನ ಮೊಬಲಗು ರೂ 500/–)
- ಮೃತ ಸದಸ್ಯರ ಪಾಲು ಬಂಡವಾಳ ಖಾತೆಗಳಲ್ಲಿ ವಾರೀಸುದಾರರು ತಮ್ಮ ಕ್ಲೈಮ್ ಅರ್ಜಿಯನ್ನು ಸಲ್ಲಿಸಿ ಮೃತ ಸದಸ್ಯರ ಬಾಧ್ಯತೆಗಳನ್ನು (ಠೇವಣಿ ಮತ್ತು ಸಾಲ) ಕೊನೆಗೊಳಿಸಲು ಸಹಕರಿಸುವುದು. ಇಲ್ಲವಾದಲ್ಲಿ ಸಹಕಾರ ಸಂಘದ ಉಪನಿಬಂಧನೆಯಂತೆ ಕ್ಷೇಮನಿಧಿಗೆ ವರ್ಗಾಯಿಸಲು ಕ್ರಮವಿಡಲಾಗುವುದು.
- ಪಾಲು ಮುನಾಫೆಯನ್ನು 3 ವರ್ಷಗಳಿಂದ ಪಡೆಯದೇ ಬಾಕಿ ಇದ್ದಲ್ಲಿ ಅಂತಹ ಸದಸ್ಯರ ಪಾಲುಮುನಾಫೆ ಮೊತ್ತವನ್ನು ಉಪನಿಬಂಧನೆ ಪ್ರಕಾರ ಕ್ಷೇಮನಿಧಿಗೆ ವರ್ಗಾಯಿಸಲಾಗುವುದು.

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

## 2026–27 ಮತ್ತು 2027–28ನೇ ಸಾಲುಗಳ ಅಂದಾಜು ಮುಂಗಡ ಪತ್ರ

| ಕ್ರ ಸಂ. | ವಿವರ | 2025–26ನೇ ಸಾಲಿನಲ್ಲಿ ಗಳಿಸಿದ ಆದಾಯ | 2026–27ನೇ ಸಾಲಿನ ಅಂದಾಜು ಆದಾಯ | 2027–28ನೇ ಸಾಲಿನ ಅಂದಾಜು ಆದಾಯ |
|---|---|---|---|---|
| 1 | ಸಾಲಗಳಿಂದ ಬಡ್ಡಿ | 13,18,66,609.50 | 19,00,00,000.00 | 19,00,00,000.00 |
| 2 | ವಿನಿಯೋಗಗಳಿಂದ ಬಡ್ಡಿ | 4,55,41,968.00 | 5,50,00,000.00 | 6,50,00,000.00 |
| 3 | ಇತರ ಆದಾಯಗಳಿಂದ | 74,50,518.97 | 87,50,000.00 | 1,20,00,000.00 |
| 4 | ವ್ಯಾಪಾರ ಲಾಭ | 17,55,427.45 | 22,50,000.00 | 25,00,000.00 |
| | **ಒಟ್ಟು** | **18,66,14,523.92** | **25,60,00,000.00** | **26,95,00,000.00** |

| ಕ್ರ ಸಂ. | ವಿವರ | 2025–26ನೇ ಸಾಲಿನ ಖರ್ಚು | 2026–27ನೇ ಸಾಲಿನ ಅಂದಾಜು ಖರ್ಚು | 2027–28ನೇ ಸಾಲಿನ ಅಂದಾಜು ಖರ್ಚು |
|---|---|---|---|---|
| 1 | ಠೇವಣಿಗಳಿಗೆ ಬಡ್ಡಿ | 10,71,57,747.00 | 16,00,00,000.00 | 18,40,00,000.00 |
| 2 | ಸಿಬ್ಬಂದಿ ವೇತನ ಮತ್ತು ಭತ್ತೆಗಳು | 1,94,35,183.30 | 2,50,00,000.00 | 2,87,50,000.00 |
| 3 | ಪ್ರಕಟಣೆ ಜಾಹೀರಾತು | 1,13,775.67 | 2,00,000.00 | 2,30,000.00 |
| 4 | ತೆರಿಗೆ ಸಲಹೆಗಾರರ ಸಂಭಾವನೆ | 96,492.00 | 2,00,000.00 | 2,30,000.00 |
| 5 | ಬ್ಯಾಂಕ್ ಕಮಿಷನ್ | 11,019.92 | 50,000.00 | 57,500.00 |
| 6 | ಶಾಖೆ ಪ್ರಾರಂಭದ ಬಗ್ಗೆ | 5,22,725.88 | 10,00,000.00 | 11,50,000.00 |
| 7 | ಗಣಕ ಯಂತ್ರ ನಿರ್ವಹಣಾ ಶುಲ್ಕ | 7,60,325.45 | 12,00,000.00 | 13,80,000.00 |
| 8 | ನಿರ್ದೇಶಕರ ಭತ್ತೆ | 4,96,000.00 | 7,50,000.00 | 8,62,500.00 |
| 9 | ಗುತ್ತಿಗೆ ನೌಕರರ ವೇತನ | 5,41,396.00 | 7,50,000.00 | 8,62,500.00 |
| 10 | ಠೇವಣಿ ಸಂಗ್ರಹಣಾ ಕಮಿಷನ್ | 97,094.00 | 2,00,000.00 | 2,30,000.00 |
| 11 | ದೇಣಿಗೆ | 1,93,501.00 | 4,00,000.00 | 4,60,000.00 |
| 12 | ವಿದ್ಯುತ್ ಬಿಲ್ | 4,51,157.00 | 7,50,000.00 | 8,62,500.00 |
| 13 | ಮಹಾಸಭೆ ಖರ್ಚು | 10,42,812.54 | 14,00,000.00 | 16,10,000.00 |
| 14 | ಅತಿಥಿ ಸತ್ಕಾರ ವೆಚ್ಚ | 6,529.00 | 1,00,000.00 | 1,15,000.00 |
| 15 | ಗೌರವಧನ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ | 48,000.00 | 1,00,000.00 | 1,15,000.00 |
| 16 | ಪರಿವೀಕ್ಷಣಾ ಖರ್ಚು | 44,200.00 | 1,00,000.00 | 1,15,000.00 |
| 17 | ಶಾಖೆಯ ಒಳವಿನ್ಯಾಸದ ಬಗ್ಗೆ | 2,92,906.02 | 6,00,000.00 | 6,90,000.00 |
| 18 | ಆದಾಯ ತೆರಿಗೆ | 2,67,297.00 | 3,50,000.00 | 4,02,500.00 |
| 19 | ಕುಶಲ ಕರ್ಮಿ ಮಾಸಿಕ ಪಿಂಚಣಿ | 13,000.00 | 50,000.00 | 57,500.00 |
| 20 | ಕಾನೂನು ಸಲಹೆ | 2,682.00 | 1,00,000.00 | 1,15,000.00 |
| 21 | ಪರವಾನಿಗೆ ನವೀಕರಣ | 23,242.36 | 50,000.00 | 57,500.00 |
| 22 | ಸಭೆ, ಸಮಾರಂಭದ ಖರ್ಚು | 22,955.00 | 3,00,000.00 | 3,45,000.00 |
| 23 | ವಿಮೆ | 9,08,049.00 | 13,00,000.00 | 14,95,000.00 |
| 24 | ವಾರ್ತಾ ಪತ್ರಿಕೆ | 41,770.00 | 60,000.00 | 69,000.00 |
| 25 | ನಿತ್ಯನಿಧಿ ಕಮಿಷನ್ | 90,29,240.00 | 1,40,00,000.00 | 1,61,00,000.00 |
| 26 | ಇತರ ಖರ್ಚು | 2,14,898.97 | 4,00,000.00 | 4,60,000.00 |
| 27 | ಪೂಜೆಯ ಖರ್ಚು | 1,26,345.00 | 2,50,000.00 | 2,87,500.00 |

| | | | | |
|---|---|---|---|---|
| 28 | ಮುದ್ರಣ ಮತ್ತು ಲೇಖನ ಸಾಮಾಗ್ರಿ | 4,07,562.64 | 6,00,000.00 | 6,90,000.00 |
| 29 | ಎಸ್ ಎಂ ಎಸ್ ಶುಲ್ಕ | 1,06,284.70 | 2,50,000.00 | 2,50,000.00 |
| 30 | ಸಿಬ್ಬಂದಿ ತರಬೇತಿ ಖರ್ಚು | 47,090.00 | 1,00,000.00 | 1,15,000.00 |
| 31 | ಸಿಬ್ಬಂದಿ ಮತ್ತು ನಿತ್ಯನಿಧಿ ಸಂಗ್ರಾಹಕರ ಸಮವಸ್ತ್ರದ ಖರ್ಚು | 1,37,461.90 | 3,00,000.00 | 3,45,000.00 |
| 32 | ನಿರ್ದೇಶಕರ ಪ್ರಯಾಣ ಭತ್ತೆ | 32,911.00 | 1,00,000.00 | 1,15,000.00 |
| 33 | ಕಟ್ಟಡ ತೆರಿಗೆ | 99,275.00 | 2,00,000.00 | 2,30,000.00 |
| 34 | ದೂರವಾಣಿ ಖರ್ಚು | 1,88,733.60 | 3,00,000.00 | 3,45,000.00 |
| 35 | ವಾಹನ ನಿರ್ವಹಣಾ ವೆಚ್ಚ | 2,73,568.82 | 4,00,000.00 | 4,60,000.00 |
| 36 | ನೀರಿನ ಬಿಲ್ಲು | 38,375.80 | 50,000.00 | 57,500.00 |
| 37 | ತೂಕ ಮತ್ತು ಅಳತೆ | 1,150.00 | 25,000.00 | 28,750.00 |
| 38 | ಯೋಜನಾ ವರದಿ ಖರ್ಚು | – | 25,000.00 | 28,750.00 |
| 39 | ಇ – ಸ್ಟಾಂಪ್ ಕಮಿಷನ್ | 6,816.18 | 25,000.00 | 28,750.00 |
| 40 | ಅಂಚೆ ವೆಚ್ಚ | 1,95,304.00 | 3,00,000.00 | 3,45,000.00 |
| 41 | ಬಾಡಿಗೆ | 11,54,848.84 | 15,00,000.00 | 17,25,000.00 |
| 42 | ಲೆಕ್ಕ ಪರಿಶೋಧಕರ ಸಂಭಾವನೆ | 2,50,000.00 | 3,00,000.00 | 3,45,000.00 |
| 43 | ತೋಟ ನಿರ್ವಹಣಾ ಖರ್ಚು | 3,010.00 | 25,000.00 | 28,750.00 |
| 44 | ಪಡೆದ ಸಾಲಗಳ ಮೇಲಿನ ಬಡ್ಡಿ | 1,37,188.00 | 7,50,000.00 | 8,62,500.00 |
| 45 | ಸಿಬ್ಬಂದಿ ನೇಮಕಾತಿ ಬಗ್ಗೆ | – | 2,00,000.00 | 2,30,000.00 |
| 46 | ಸದಸ್ಯರ ಮಾಹಿತಿ ಶಿಬಿರ | – | 1,00,000.00 | 1,15,000.00 |
| 47 | ಆಡಳಿತ ಮಂಡಳಿ ಸಭೆ ಖರ್ಚು | 78,223.00 | 1,50,000.00 | 1,72,500.00 |
| 48 | ದುರಸ್ತಿ ಖರ್ಚು | 2,24,416.70 | 5,00,000.00 | 5,75,000.00 |
| 49 | ಸಹಕಾರಿ ಸಪ್ತಾಹ | 35,000.00 | 50,000.00 | 57,500.00 |
| 50 | ಜಿ ಎಸ್ ಟಿ ಪಾವತಿ (ಆಡಿಟ್ ಬಾಬ್ತು) | 45,893.00 | 50,000.00 | 57,500.00 |
| 51 | ಕಟ್ಟಡ ದುರಸ್ಥಿ | – | 5,00,000.00 | 5,00,000.00 |
| 52 | ವಾಪಾರ ವೆಚ್ಚ | 1,18,226.80 | 2,50,000.00 | 2,50,000.00 |
| | **ಜುಮ್ಲಾ** | **14,45,11,908.73** | **21,67,10,000.00** | **24,90,66,500.00** |

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ ಪುತ್ತೂರು ದ. ಕ.

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು – 574 201

## 2025–26ನೇ ಸಾಲಿನ ವ್ಯಾಪಾರ–ವಹಿವಾಟಿನ ತಖ್ತೆ (ಕ್ರೋಢೀಕೃತ)

| | ಖರೀದಿ | ಮೊತ್ತ | | ಮಾರಾಟ | ಮೊತ್ತ |
|---|---|---|---|---|---|
| 1 | ಆರಂಭದ ದಾಸ್ತಾನು | 1827119.46 | 1 | ಮಾರಾಟ | 3601822.80 |
| 2 | ಖರೀದಿ | 2355775.00 | 2 | ಕುಂಬಾರಿಕಾ ಉತ್ಪಾದನಾ ಆದಾಯ | 88847.00 |
| 3 | ವ್ಯಾಪಾರದ ಖರ್ಚು | 118226.80 | 3 | ಆಖೈರು ದಾಸ್ತಾನು | 2365878.91 |
| 4 | ವ್ಯಾಪಾರದ ಲಾಭ | 1755427.45 | | | |
| | **ಜುಮ್ಲಾ** | **6056548.71** | | **ಜುಮ್ಲಾ** | **6056548.71** |

| ಸಹಿ | ಸಹಿ | ಸಹಿ | ಸಹಿ |
|---|---|---|---|
| **ಮುಖ್ಯ ಕಾರ್ಯನಿರ್ವಹಣಾಧಿಕಾರಿ** | **ನಿರ್ದೇಶಕರು** | **ನಿರ್ದೇಶಕರು** | **ಅಧ್ಯಕ್ಷರು** |

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು, ದ. ಕ. – 574 201

## ದಿನಾಂಕ 01–04–2025ರಿಂದ 31–03–2026ರ ವರೆಗಿನ ಜಮಾ ಖರ್ಚಿನ ವಿವರ

| ಕ್ರ ಸಂ. | ವಿವರ | ಜಮಾ | ಖರ್ಚು |
|---|---|---|---|
| 1 | ಶಾಖಾ ಲೆಕ್ಕ | 1137316949.72 | 1137316949.72 |
| 2 | ಪಾಲು ಬಂಡವಾಳ | 2654510.00 | 123170.00 |
| 3 | ಸದಸ್ಯರ ಠೇವಣಿಗಳು | 3877626345.98 | 3498777670.46 |
| 4 | ಸಿಬ್ಬಂದಿ ಠೇವಣಿಗಳು | 4155341.00 | 208022.00 |
| 5 | ಜಿ.ಕೇ.ಸ. ಬ್ಯಾಂಕಿನ ಸಾಲಗಳು | 126223726.00 | 126223726.00 |
| 6 | ಸದಸ್ಯರ ಸಾಲಗಳು | 1446832251.00 | 1670949105.00 |
| 7 | ಸಿಬ್ಬಂದಿ ಸಾಲಗಳು | 2961296.00 | 4603000.00 |
| 8 | ಮಾರಾಟ | 3612596.00 | 20790.00 |
| 9 | ವ್ಯಾಪಾರದ ಆದಾಯ | 104542.00 | 15695.00 |
| 10 | ಖರೀದಿ | 1381180.40 | 3736955.40 |
| 11 | ವ್ಯಾಪಾರದ ಖರ್ಚು | | 108210.00 |
| 12 | ಸಾಲಗಳ ಮೇಲಿನ ಬಡ್ಡಿ | 131902295.50 | 35686.00 |
| 13 | ಠೇವಣಾತಿ ಮೇಲಿನ ಬಡ್ಡಿ | 241288.00 | 96458540.00 |
| 14 | ಬ್ಯಾಂಕ್ ಸಾಲಗಳ ಮೇಲಿನ ಬಡ್ಡಿ | | 137188.00 |
| 15 | ಸಿಬ್ಬಂದಿ ವೆಚ್ಚಗಳು | | 17405408.30 |
| 16 | ಇತರ ಖರ್ಚುಗಳು | 2416457.00 | 17793512.77 |
